ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ : ಕಳೆದ ಅಧಿವೇಶನದಲ್ಲಿ ನೀಡಿದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಪತಿಯವರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆ ಪಡೆದ ವಿಧೇಯಕಗಳ ಎರಡನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ರಾಜ್ಯಪಾಲರಿಂದ ಅಥವಾ ರಾಷ್ಟ್ರಪತಿಯವರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿ

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1.	ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ ವಿಧೇಯಕ 1991	30-3-91	ರಾಜ್ಯಪಾಲರು
2.	ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ 1991	30-3-91	ರಾಜ್ಯಪಾಲರು
3.	ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ 1991	30-3-91	ರಾಜ್ಯಪಾಲರು

ಅಧ್ಯಕ್ಷರು : ಸಭೆಯ ಮುಂದಿಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಲಾ ಅಂಡ್ ಆರ್ಡರ್ ಸಿಚುಯೇಷನ್ ಬಗ್ಗೆ ರಿಪ್ಲೈ ಕೊಡುತ್ತೇನೆಂದು ಹೇಳಿದ್ದರು. ಅದಕ್ಕಿಂತ ಮುಂಚೆ ಹುಬ್ಬಳ್ಳಿಯಲ್ಲಿ ಗೋಲಿಬಾರ್ ಆಗಿರುವ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಹುಬ್ಬಳ್ಳಿಯಲ್ಲಿ ಇನ್ನೂ ಪರಿಸ್ಥಿತಿ ಬಹಳ ಟೆನ್‌ಷನ್ ಆಗಿದೆ.

ಅಧ್ಯಕ್ಷರು : ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಶೂನ್ಯ ವೇಳೆಯಲ್ಲಿ ಒಂದು ವಿಷಯ ಮಾತನಾಡಲು ನನ್ನ ಅನುಮತಿ ಕೋರಿದ್ದರು. ಈಗ ಅವರು ಮಾತನಾಡಲು ನಿಂತಿದ್ದಾರೆ. ಅವರು ಮೊದಲು ಮಾತನಾಡಲಿ. ನಂತರ ತಮಗೂ ವಿಷಯ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಈಗಾಗಲೇ ಅದರ ಬಗ್ಗೆ ಮಾತನಾಡಿ ವಾಕೌಟ್ ಮಾಡಿಕೊಂಡು ಹೋಗಿದ್ದರು.

ಅಧ್ಯಕ್ಷರು : ಅವರು ಏನು ಮಾತನಾಡುತ್ತಾರೆಂದು ನಿಮಗೆ ಹೇಳಿದ್ದಾರೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹುಬ್ಬಳ್ಳಿ ವಿಷಯ ಕುರಿತು ಮಾತನಾಡುವುದಿಲ್ಲ ಅಂದುಕೊಂಡಿದ್ದೇನೆ.

ಅಧ್ಯಕ್ಷರು : ಹುಬ್ಬಳ್ಳಿಯಿಂದ ಅವರು ಮುಂಬೈಗೆ ಹೋದಂತೆ ಕಾಣುತ್ತದೆ.